# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಓ ಎಸ್ ನಂ. 32-2011** **ಪಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಎನ್.ಸಿ.ಶಿವಣ್ಣ<br>ನಂಜೀಪುರ ಗ್ರಾಮ, ಹೆಚ್.ಡಿ.ಕೋಟೆ ತಾ. |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 02-06-2022. |

**ಮುಂದುವರೆದ ಪಾಟೀ ಸವಾಲುಃ ಶ್ರೀ ಎಂ.ಎಸ್ ವಕೀಲರಿಂದಃ**

6. ನನ್ನ ತಂದೆಯವರು ಹೆಸರು ಚಿಕ್ಕಗಂಡಯ್ಯ ಎಂದರೆ ಸರಿ. ನನ್ನ ದೊಡ್ಡಪ್ಪನವರ ಹೆಸರು ನಂಜಯ್ಯ ಎಂದರೆ ಸರಿ. ನನ್ನ ತಂದೆ ಸಹಿ ಮಾಡಲು ಹೆಬ್ಬೆಟ್ಟಿನ ಗುರುತನ್ನು ಹಾಕುತಿದ್ದರು. ನನ್ನ ದೊಡ್ಡಪ್ಪನವರು ತನ್ನ ಸಹಿಯನ್ನು ಹೆಬ್ಬೆಟ್ಟಿನ ಗುರುತಿನ ಮುಖೇನ ಮಾಡುತ್ತಿದ್ದರೋ ಅಥವಾ ಸಹಿ ಮಾಡುತ್ತಿದ್ದರೋ ನನಗೆ ಗೊತ್ತಿಲ್ಲ. ಹೆಚ್.ಡಿ.ಕೋಟೆ ತಾಲ್ಲೂಕು, ಸರಗೂರು ಹೋಬಳಿ, ಎಲ್ಲಂಬಾಳುದಾಖಲೆ, ನಂಜೀಪುರ ಗ್ರಾಮದ ನಂಜಯ್ಯನವರ ಮಗ ನಂಜಯ್ಯ ನನ್ನ ದೊಡ್ಡಪ್ಪ ಎಂದರೆ ಸರಿ. ಅವರ ತಮ್ಮ ಚಿಕ್ಕಗಂಡಯ್ಯ ಎಂದರೆ ನನ್ನ ತಂದೆ ಎಂದರೆ ಸರಿ. ನಂಜೀಪುರ ಗ್ರಾಮದ ಶಿಲಿಂಗಪ್ಪ, ಮಹದೇವಪ್ಪ ಎಂದರೆ ನನಗೆ ಗೊತ್ತಿಲ್ಲ. ಆದರೆ ಮಹದೇವಯ್ಯನವರು ನನಗೆ ಗೊತ್ತು. ಶಂಭುಲಿಂಗಪ್ಪನವರು ನನಗೆ ಗೊತ್ತಿಲ್ಲ. ದಿ.11-05-1992 ರಲ್ಲಿ ನನ್ನ ತಂದೆ ಮತ್ತು ನಮ್ಮ ದೊಡ್ಡಪ್ಪನವರು ನಡುವೆ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ. ದಿ.11-05-1992 ವಿಭಾಗ ಪತ್ರದಂತೆ ನನ್ನ ತಂದೆಯವರಿಗೆ ದಾವಾ ಷೆಡ್ಯೂಲ್ 2 ನೇ ಐಟಂ ಸ್ವತ್ತಿನಲ್ಲಿ 2 ಎಕರೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಿಭಾಗ ಪತ್ರದಲ್ಲಿ ನಮೂದಿಸಿರುವ ಸರ್ವೇ ನಂ.16 ರ ಜಮೀನಿನ ನಂಬರ್ ಮಾರ್ಪಾಡು ಆಗಿ ಸರ್ವೇ ನಂ.121 ಎಂದು ಪಹಣಿ ಪತ್ರಿಕೆ ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ದಿ.11-05-1992 ರ ವಿಭಾಗ ಪತ್ರದಲ್ಲಿನ ಒಕ್ಕಣೆಗಳನ್ನು ಸಾಕ್ಷಿಗೆ ಓದಿ ಹೇಳಲಾಗಿ ಸಾಕ್ಷಿಯು ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತಿನ ಸಂಬಂಧ ಬರೆದಿರುವ ಒಕ್ಕಣೆಗಳು ನನಗೆ ಗೊತ್ತಿಲ್ಲ ಎಂದು, ನಂತರ ಸಾಕ್ಷಿ ಅದು ಸುಳ್ಳಾಗಿರುತ್ತದೆ ಎಂದು ನುಡಿಯುತ್ತಾರೆ. ಭೂ ಸುಧಾರಣಾ ಕಾಯ್ದೆ ಅನ್ವಯ ಉಂಟಾದ ವ್ಯಾಜ್ಯಗಳಿಗೆ ತಗುಲಿದ ಖರ್ಚನ್ನು ನನ್ನ ತಂದೆಯವರು ಭರಿಸಲು ಸಾಧ್ಯವಾಗದೇ ಇದ್ದ ಕಾರಣ ನನ್ನ ತಂದೆಯವರು ದಾವಾ ಷೆಡ್ಯೂಲ್ 1 ನೇ ಐಟಂ ಪೂರ್ಣ ಸ್ವತ್ತಿಗೆ ಹಾಗೂ ದಾವಾ ಷೆಡ್ಯೂಲ್ 2 ನೇ

ಐಟಂ ಸ್ವತ್ತಿನ ವಿಸ್ತೀರ್ಣ 2 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ದಿ.11-05-1992 ರಂದು ನನ್ನ ತಂದೆ ನನ್ನ ದೊಡ್ಡಪ್ಪನವರಿಗೆ ವಿಭಾಗ ಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನನ್ನ ತಂದೆಯವರು ದಾವಾ ಷೆಡ್ಯೂಲ್ 1 ನೇ ಐಟಂ ಪೂರ್ಣ ಸ್ವತ್ತಿಗೆ ಹಾಗೂ ದಾವಾ ಷೆಡ್ಯೂಲ್ 2 ನೇ ಐಟಂ ಸ್ವತ್ತಿನ ವಿಸ್ತೀರ್ಣ 2 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ದಿ.11-05-1992 ರ ವಿಭಾಗ ಪತ್ರದ ಪ್ರಕಾರ ತನ್ನ ಹಕ್ಕನ್ನು ಬಿಡುಗಡೆಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಇದರಿಂದಾಗಿ ದಾವಾ ಷೆಡ್ಯೂಲ್ 1 ನೇ ಐಟಂ ಪೂರ್ಣ ಸ್ವತ್ತಿಗೆ ಹಾಗೂ ದಾವಾ ಷೆಡ್ಯೂಲ್ 2 ನೇ ಐಟಂ ಸ್ವತ್ತಿನ ವಿಸ್ತೀರ್ಣ 2 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಷೆಡ್ಯೂಲ್ 1 ನೇ ಐಟಂ ಸ್ವತ್ತಿಗೆ ಪೂರ್ಣವಾಗಿ ಮತ್ತು ದಾವಾ 2 ನೇ ಐಟಂ ಸ್ವತ್ತಿನ ವಿಸ್ತೀರ್ಣ 2 ಎಕರೆ ಸ್ವತ್ತಿಗೆ ಸಂಬಂಧಿಸಿದಂತೆ ಪ್ರತಿವಾದಿಯ ಮಕ್ಕಳೇ ಸಂಪೂರ್ಣ ಮಾಲೀಕರು ಮತ್ತು ಹಕ್ಕುದಾರರಾಗಿರುತ್ತಾರೆ ಎಂದರೆ ಸರಿಯಲ್ಲ. ದಿ.11-05-1992 ರ ವಿಭಾಗ ಪತ್ರದಂತೆ ನನ್ನ ತಂದೆಯವರು ದಾವಾ ಷೆಡ್ಯೂಲ್ 2 ನೇ ಐಟಂ ಸ್ವತ್ತಿನಲ್ಲಿ 2 ಎಕರೆ ಜಮೀನನ್ನು ವಿಭಾಗ ಮುಖೇನ ಪಡೆದುಕೊಂಡಿರುವುದರಿಂದ ಮತ್ತೊಮ್ಮೆ ವಿಭಾಗ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ, ಆದುದರಿಂದ ನಾನು ಸಲ್ಲಿಸಿರುವ ದಾವಾವು ಊರ್ಜಿತವಾಗತಕ್ಕದ್ದಲ್ಲ ಎಂದರೆ ಸರಿಯಲ್ಲ.

7. ಈಗ ಹಾಲಿ ದಾವಾ ಸ್ವತ್ತುಗಳ ಮೌಲ್ಯವು ಹೆಚ್ಚಾಗಿರುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳ ಮೌಲ್ಯ ಹೆಚ್ಚಾಗಿರುವುದರಿಂದ ದುರುದ್ದೇಶದಿಂದ ಈ ದಾವಾವನ್ನು ಪ್ರತಿವಾದಿ ವಿರುದ್ಧ ವಿಭಾಗಕ್ಕಾಗಿ ಸಲ್ಲಿಸಿರುತ್ತೇನೆ ಎಂದೆರ ಸರಿಯಲ್ಲ. ನಾನು ದಾವಾದಲ್ಲಿ ಕೋರಿರುವ ಪರಿಹಾರಕ್ಕೆ ಅರ್ಹನಾಗಿರುವುದಿಲ್ಲ ಎಂದರೆ ಸರಿಯಲ್ಲ. ದಿ.11-05-1992 ರ ವಿಭಾಗ ಪತ್ರದಲ್ಲಿ ಬರೆದಿರುವ ಒಕ್ಕಣೆಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದ್ದರೂ ಸಹ ಮಾಹಿತಿ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**